**ಪ್ರಧಾನ  ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

**ಪ್ರಧಾನ ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರ. ದ. ನ್ಯಾ.ದಂ.**

**ಅಸಲು ದಾವಾ ಸಂಖ್ಯೆ.  228/2020**

**ದಿನಾಂಕಃ 27 ನೇ ಫೆಬ್ರವರಿ  2023**

**ವಾದಿಃ** ಶ್ರೀ ಕೆ.ಎಂ. ಬಾಲಗಣೇಶ್
ಬಿನ್ ಲೇಟ್ ಮರಲಿಂಗ,
ಸುಮಾರು 35 ವರ್ಷಗಳು,
ವಾಸಃ ಡೋರ್ ನಂ. 7/255 ಬಿ, ದಕ್ಷಿಣ ಬಡಾವಣೆ,
ಕೊಳ್ಳೇಗಾಲ ಪಟ್ಟಣ, ಚಾಮರಾಜನಗರ ಜಿಲ್ಲೆ.

**(ವಾದಿ ಪರ ಮಹದೇವ್ ದೇಶಕ್, ವಕೀಲರು)**

**ವಿರುದ್ಧ**

**ಪ್ರತಿವಾದಿಃ** ಶ್ರೀ ಪಿ. ರಾಜೇಂದ್ರ ಕುಮಾರ್
ಬಿನ್ ಲೇಟ್ ಪುಟ್ಟಮಲ್ಲು,
ಸುಮಾರು 44 ವರ್ಷಗಳು,
ವಾಸಃ ಡೋರ್ ನಂ. 1/198, ಹೊಸಬೀದಿ,
ಭೀಮನಗರ, ಕೊಳ್ಳೇಗಾಲ ಪಟ್ಟಣ,
ಚಾಮರಾಜನಗರ ಜಿಲ್ಲೆ.

**( ಪ್ರತಿವಾದಿ  ಪರ ಶ್ರೀ  ಪ್ರಕಾಶ್, ವಕೀಲರು )**

**ಪ್ರತಿವಾದಿ/ ಅರ್ಜಿದಾರ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VII ನಿಯಮ 11 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:4 ರ ಮೇಲಿನ ಆದೇಶ**

ಅರ್ಜಿದಾರ/ಪ್ರತಿವಾದಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VII ನಿಯಮ 11 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಸದರಿ ಅರ್ಜಿಯಲ್ಲಿ ವಾದಪತ್ರವನ್ನು ವಜಾಗೊಳಿಸಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರ/ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯ ಜೊತೆಗಿನ ಪ್ರಮಾಣ ಪತ್ರದಲ್ಲಿ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶಕ್ಕಾಗಿ ಸದರಿ ದಾವೆಯನ್ನು ರೆವಿನ್ಯೂ ದಾಖಲೆಗಳ ಅಧಾರದ ಮೇಲೆ ದಾಖಲಿಸಿದ್ದು, ಷೆಡ್ಯೂಲ್ ಸ್ವತ್ತು ಮೋಡನಹಳ್ಳಿ ಗ್ರಾಮ, ಲೊಕ್ಕನಹಳ್ಳಿ ಹೋಬಳಿಯ ಸರ್ವೆ ನಂಬರ್ 91/ಎ1 ವಿಸ್ತೀರ್ಣ 2 ಎಕರೆ 74 ಸೆಂಟ್ಸ್ ನಲ್ಲಿ ವಾದಿಯು ತಾನು ಸ್ವಾಧೀನಾನುಭವದಲ್ಲಿರುವುದಾಗಿ ತಿಳಿಸಿದ್ದು, ಆದರೆ ವಾಸ್ತವಿಕವಾಗಿ ಸದರಿ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುವುದಿಲ್ಲ. ವಾದಿಯು ಹಾಜರು ಪಡಿಸಿರುವ ದಿನಾಂಕಃ 02/01/2021ರ ರೆವಿನ್ಯೂ ದಾಖಲೆಯಾದ ಪಹಣಿ ಪತ್ರಿಕೆಯ ಕಲಂ. 9 ಅಥವಾ ಕಲಂ. 10 ರಲ್ಲಿ ವಾದಿಯ ಹೆಸರು ನಮೂದು ಇರುವುದಿಲ್ಲ. ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ. 132ರ ಪ್ರಕಾರ ಪಹಣಿ ಪತ್ರಿಕೆಯಲ್ಲಿ ಕಲಂ ನಂಬರ್ 9 ರಲ್ಲಿ ಸ್ವಾಧೀನ ಕಲಂ 10 ರಲ್ಲಿ ಮಾಲೀಕತ್ವದ ಬಗ್ಗೆ ಹಾಗೂ ಕಲಂ. 12 ರಲ್ಲಿ ಮ್ಯುಟೇಷನ್ ಅಂಗೀಕರಿಸಿರುವ ಬಗ್ಗೆ ನಮೂದನೆ ಇರುತ್ತದೆ. ಅದರೆ ವಾದಿಯು ನ್ಯಾಯಾಲಯಕ್ಕೆ ಶುದ್ಧ ಹಸ್ತದಿಂದ ಹಾಜರಾಗಿರುವುದಿಲ್ಲ ಮತ್ತು ಪ್ರತಿವಾದಿಯ ವಿರುದ್ಧ ಸುಳ್ಳು ವಿವಾದವನ್ನು ಸೃಷ್ಟಿಸಿ

ಲಾಭ ಪಡೆಯುವ ಉದ್ದೇಶದಿಂದ ದಾವೆ ದಾಖಲಿಸಿರುವುದಾಗಿ ಹಾಗೂ ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಚಂಗಳವಾರಯ್ಯ ನಾಯ್ಡು ಪ್ರಕರಣ AIR 1994 SC 53 ರಲ್ಲಿ ದಾವೆಯ ಯಾವುದೇ ಹಂತದಲ್ಲೂ ದಾವೆ ವಜಾಕರಿಸುವ ಬಗ್ಗೆ ಆದೇಶಿಸಿರುತ್ತಾರೆ. ಪ್ರತಿವಾದಿ/ಅರ್ಜಿದಾರರು ಮುಂದುವರೆದು ವಾದಿಯು ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 133 ರಡಿಯಲ್ಲಿ ರೆವಿನ್ಯೂ ದಾಖಲೆ ಬಗ್ಗೆ ಪೂರ್ವಭಾವನೆ ಪಡೆಯಬಹುದಾಗಿದ್ದರೂ ಆ ರೀತಿಯ ರೆವಿನ್ಯೂ ದಾಖಲೆಗಳ ನಮೂದನೆ ಕಾನೂನುಬದ್ಧವಾಗಿದ್ದು, ವಾದಿಯು ಪಹಣಿ ಪತ್ರಿಕೆಯ ಕಲಂ.9 ಮತ್ತು ಕಲಂ.12(2) ರಡಿಯಲ್ಲಿ ತನ್ನ ಹೆಸರು ನಮೂದಾಗಿರುವುದನ್ನು ಆಧರಿಸಿ ವ್ಯಾಜ್ಯಕಾರಣ ಉದ್ಭವವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಅರವಿಂದನಂದಂ ಪ್ರಕರಣದ ILR 1978 ರ ಪುಟ 1 ರಲ್ಲಿ ವ್ಯಕ್ತಿಯ ಪ್ರಕರಣವು ಸುಳ್ಳು ಹಕ್ಕು ಸಾಧನೆ ಮಾಡುತ್ತಿರುವುದಾಗಿ ಕಂಡುಬಂದರೆ ವಾದಿಯ ವಿಚಾರಣೆಗೂ ಮೊದಲೇ ಪ್ರಕರಣವನ್ನು ಇತ್ಯರ್ಥಗೊಳಿಸಬಹುದೆಂಬುದಾಗಿ ತಿಳಿಸಿರುವುದರಿಂದ, ವಾದಿಯ ವಾದಪತ್ರದಲ್ಲಿ ಸುಳ್ಳು ಪ್ರತಿಪಾದನೆ ಮಾಡುತ್ತಿರುವುದಾಗಿ ಕಂಡು ಬರುತ್ತಿರುವ ಕಾರಣದಿಂದ ದಾವೆಯನ್ನು ಈ ಹಂತದಲ್ಲಿಯೇ ವಜಾಕರಿಸಬೇಕೆಂದು ಕೋರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಅದರಂತೆ ವಾದಿಯು ಸದರಿ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ಪ್ರತಿವಾದಿ/ಅರ್ಜಿದಾರರ ಅರ್ಜಿ ಊರ್ಜಿತವಾದುದಲ್ಲ ಬದಲಾಗಿ ಮೇಲ್ನೋಟಕ್ಕೆ

ಅರ್ಜಿಯನ್ನು ವಜಾಕರಿಸಲು ಯೋಗ್ಯವಾಗಿರುತ್ತದೆ. ದಾವೆಯನ್ನು ದಾಖಲಿಸುವ ಕಾಲಕ್ಕೆ ವಾದಿಯ ಹೆಸರಿನಲ್ಲಿದ್ದು, ದಾವೆಯ ನಂತರದಲ್ಲಿ ಪ್ರತಿವಾದಿ ಹೆಸರಿಗೆ ಬದಲಾವಣೆಯಾಗಿರುವುದಿಲ್ಲ. ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ.132 ಮತ್ತು ಕಲಂ. 133 ರ ಪೂರ್ವಭಾವನೆಯ ಬಗ್ಗೆ ವಿವರಿಸಿರುವ ಅಂಶಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರಡಿಯಲ್ಲಿ ಪರಿಗಣಿಸಲು ಬರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರಡಿಯಲ್ಲಿ ವಾದಪತ್ರ ವಜಾಕರಿಸಲು ನಿರ್ದಿಷ್ಟ ಕಾರಣಗಳ ಬಗ್ಗೆ ವಿವರಿಸಲಾಗಿದ್ದರೂ, ಈ ಅರ್ಜಿಯಲ್ಲಿನ ಯಾವ ಅಂಶವು ವಾದಪತ್ರವನ್ನು ವಜಾಕರಿಸಲು ತಿಳಿಸಿರುವುದಿಲ್ಲ. ಅರ್ಜಿದಾರ/ಪ್ರತಿವಾದಿಯು ದಾವೆಯನ್ನು ವಿಳಂಬ ಮಾಡುವ ದೃಷ್ಟಿಯಿಂದ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರ/ಪ್ರತಿವಾದಿಯು ಲಿಖಿತ ಹೇಳಿಕೆ ಸಲ್ಲಿಸದೆ, ದಾವೆಯನ್ನು ವಿಳಂಬ ಮಾಡುವ ದೃಷ್ಟಿಯಿಂದ ಅರ್ಜಿ ಸಲ್ಲಿಸಿರುವುದರಿಂದ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿ ತಕರಾರನ್ನು ಸಲ್ಲಿಸಿರುತ್ತಾರೆ.

**4.** ಉಭಯತ್ರರರ ಪರ ವಕೀಲರ ಸುನಾವಣೆಯನ್ನು ಆಲಿಸಲಾಯಿತು.

**5.** ಅರ್ಜಿದಾರ/ಪ್ರತಿವಾದಿಯ ಅರ್ಜಿ ಮತ್ತು ಎದುರುದಾರ/ವಾದಿಯ ತಕರಾರನ್ನು ಆಧರಿಸಿ ನ್ಯಾಯಾಲಯದ ವಿವೇಚನೆಗೆ ಈ ಕೆಳಗಿನ ಅಂಶಗಳ ಪ್ರಶ್ನೆಗಳು ಉದ್ಭವವಾಗುತ್ತವೆ.

*1. ಅರ್ಜಿದಾರರ ಅರ್ಜಿಯನ್ನು ಪರಿಗಣಿಸಲು ಸಕಾರಣಗಳಿರುತ್ತವೆಯೇ?*

*2. ಯಾವ ಆದೇಶ?*

6. ಅದರಂತೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ನ್ಯಾಯಾಲಯವು ಉತ್ತರಿಸಲಾಗಿರುತ್ತದೆ.

ಅಂಶ 1ಃ ನಕರಾತ್ಮಕವಾಗಿ

ಅಂಶ 2 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ

**ಕಾರಣಗಳು**

7. **ಅಂಶ 1 ಃ** ಅರ್ಜಿದಾರ/ಪ್ರತಿವಾದಿಯು ವಾದಿಯು ಸಲ್ಲಿಸಿರುವ ದಾವೆಯನ್ನು ಈ ಹಂತದಲ್ಲಿಯೇ ವಜಾಕರಿಸುವ ಬಗ್ಗೆ ಮಧ್ಯಂತರ ಅರ್ಜಿ ಸಂಖ್ಯೆ: 4 ನ್ನು ಸಲ್ಲಿಸಿದ್ದು ಅದರಲ್ಲಿ ವಾದಿಯು ಕೇವಲ ಪಹಣಿ ಪತ್ರಿಕೆಯು ದಾವೆ ದಾಖಲಿಸುವ ಕಾಲಕ್ಕೆ ತನ್ನ ಹೆಸರಿನಲ್ಲಿರುವುದರ ಆಧಾರದ ಮೇಲೆ ದಾವೆ ಹೂಡಿರುವುದಾಗಿ, ಸರ್ವೆ ನಂ. 91/ಎ1 ವಿಸ್ತೀರ್ಣ 2 ಎಕರೆ 74 ಸೆಂಟ್ ಸ್ವತ್ತಿನಲ್ಲಿ ವಾದಿಯು ಸ್ವಾಧೀನದಲ್ಲಿರುವುದಿಲ್ಲ ಎಂಬುದಾಗಿ ಅರ್ಜಿಯಲ್ಲಿ ತಿಳಿಸಿರುವುದನ್ನು ಕೂಲಂಕೂಶವಾಗಿ ಪರಿಶೀಲಿಸಲಾಗಿ ಪ್ರಸ್ತುತ ದಾವೆಯು ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಸಲ್ಲಿಸಲಾಗಿರುತ್ತದೆ. ಅರ್ಜಿದಾರ/ಪ್ರತಿವಾದಿಯು ಮೆಮೋ ಮುಖೇನ 2019-2020 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ಸರ್ಕಾರಕ್ಕೆ ಸರ್ವೆ ನಂ. 91/ಎ1 ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಅದರ ಆಧಾರದ ಮೇಲೆ ವಾದಿ ಸ್ವಾಧೀನದಲ್ಲಿರುವುದಿಲ್ಲ ಎಂಬುದಾಗಿ ವಾದ ಮಂಡಿಸಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ದಾವೆಯ ವಾದಪತ್ರದ ಜೊತೆ ಕ್ರಯಪತ್ರದ ದಾಖಲೆ ದಿನಾಂಕಃ 09.05.2008 ಮತ್ತು ಅಸಲು ದಾವಾ ಸಂಖ್ಯೆ: 224/2011 ರ ತೀರ್ಪು ಮತ್ತು ಡಿಕ್ರಿಯ ಪ್ರತಿ, ಮ್ಯುಟೇಷನ್

ರಿಜಿಸ್ಟರ್, ಪಹಣಿ ಪತ್ರಿಕೆ ದಾಖಲೆ, ಟ್ರಿಬ್ಯೂನಲ್ ನ್ಯಾಯಾಲಯದ ಆದೇಶದ ಪ್ರತಿಯನ್ನು ಮತ್ತು 2022-23 ರಲ್ಲಿ ಪುನಃ ವಾದಿ ಹೆಸರಿಗೆ ಪಹಣಿ ಬರುತ್ತಿರುವುದಾಗಿ ದಾಖಲೆ ಸಲ್ಲಿಸಿರುವುದನ್ನು ಕೂಲಂಕೂಶವಾಗಿ ಪರಿಶೀಲಿಸಲಾಗಿ, ವಾದಿಯು ದಾವಾ ಸ್ವತ್ತನ್ನು ನೋಂದಣಿ ಕ್ರಯಪತ್ರದ ಮೂಲಕ ಖರೀದಿಸಿ, ಅದರಂತೆ ಮ್ಯುಟೇಷನ್ ಅಂಗೀಕರಿಸಲ್ಪಟ್ಟು, ಪಹಣಿ ಪತ್ರಿಕೆ ವಾದಿಯ ಹೆಸರಿನಲ್ಲಿರುವುದಾಗಿ ಕಂಡುಬರುತ್ತದೆ. ಅಲ್ಲದೆ ವಾದಿಯು ಅಸಲು ದಾವಾ ಸಂಖ್ಯೆ: 224/2011 ನ್ನು ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾಖಲಿಸಿದ್ದು, ಸದರಿ ದಾವೆಯನ್ನು ಡಿಕ್ರಿಗೊಳಿಸಿ ಆದೇಶವಾಗಿರುವ ಬಗ್ಗೆ ಕಂಡುಬರುತ್ತದೆ. ಹೀಗಿರುವಲ್ಲಿ ಟ್ರಿಬ್ಯುನಲ್ ನ್ಯಾಯಾಲಯದಲ್ಲಿ ಜಿ.ರಾಯ್ತುಂಗಪಾಂಡ್ಯನ್ ರವರ ವಿರುದ್ಧ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1974 ಕಲಂ. 79(ಎ) ಮತ್ತು 79(ಬಿ) ರಡಿಯಲ್ಲಿನ ನಿಯಮ/ನಿಬಂಧನೆಗಳನ್ನು ಉಲ್ಲಂಘಿಸಿರುವುದು ವಾದಿಯಾಗಿರದ ಕಾರಣ ಸದರಿ ಆದೇಶವನ್ನು ಪ್ರಸ್ತುತ ದಾವೆಯಲ್ಲಿ ಈ ಹಂತದಲ್ಲಿ ಪರಿಗಣಿಸಿ ವಾದಪತ್ರವನ್ನು ತಿರಸ್ಕರಿಸಲು ಸಕಾರಣಗಳಿರುವುದಿಲ್ಲ. ಅಲ್ಲದೆ ವಾದಿಯ ಹೆಸರಿಗೆ 2022-23 ರಲ್ಲಿ ಪಹಣಿ ಪತ್ರಿಕೆ ಬರುತ್ತಿರುವುದಾಗಿ ನ್ಯಾಯಾಲಯಕ್ಕೆ ಕಂಡುಬರುತ್ತದೆ. ಪ್ರತಿವಾದಿ/ಅರ್ಜಿದಾರರು ವಾದಿಯ ಸ್ವಾಧೀನಾನುಭವಕ್ಕೆ ಅತಿಕ್ರಮ ಪ್ರವೇಶ ಮಾಡಿ ತೊಂದರೆಯನ್ನುಂಟು ಮಾಡುತ್ತಿರುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ತೀರ್ಮಾನಿಸಬೇಕಾಗಿರುವುದರಿಂದ ಈ ಬಗ್ಗೆ ಉಭಯತ್ರರ ವಿಚಾರಣೆ ಮತ್ತು ದಾಖಲಾತಿಗಳ ಪರಿಶೀಲನೆ ಅತ್ಯವಶ್ಯಕವಾಗಿರುವುದರಿಂದ ಸರ್ಕಾರ ಮುಟ್ಟುಗೋಲು ಎಂಬುದಾಗಿ ಪಹಣಿ ಪತ್ರಿಕೆಯನ್ನು ಆಧರಿಸಿ ದಾವೆ ತಿರಸ್ಕರಿಸಲು ಬರುವುದಿಲ್ಲ.

ಅಲ್ಲದೆ ಅರ್ಜಿದಾರ/ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಯಿಂದ (ಡಿ) ರಲ್ಲಿನ ಯಾವ ಕಲಂ ಅಡಿಯಲ್ಲಿ ವಾದಪತ್ರ ತಿರಸ್ಕರಿಸಲು ಸಕಾರಣಗಳಿರುತ್ತವೆ ಎಂಬುದಾಗಿ ಅರ್ಜಿಯಲ್ಲಿ ತಿಳಿಸಿರದ ಕಾರಣದಿಂದ ಹಾಗೂ ಪ್ರಸ್ತುತ ದಾವೆಯಲ್ಲಿ ಪ್ರತಿವಾದಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸದೆ ಅದರಲ್ಲಿ ವಾದಪತ್ರ ತಿರಸ್ಕರಿಸುವ ಬಗ್ಗೆ ನಿಲುವು ಇರದೇ ಅರ್ಜಿಯನ್ನು ಸಲ್ಲಿಸಿರುವುದರಿಂದ ಅರ್ಜಿ ಪುರಸ್ಕರಿಸಲು ಸಕಾರಣಗಳಿರುವುದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟು **ಅಂಶ 1 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಯಿತು.

8. **ಅಂಶ 2ಃ** ಮೇಲೆ ಹೇಳಿರುವ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

**ಆದೇಶ**

*ಅರ್ಜಿದಾರ/ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 4 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VII ನಿಯಮ 11 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 27 ನೇ ಫಬ್ರವರಿ 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**<u>ಆದೇಶ</u>**

*ಅರ್ಜಿದಾರ/ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 4 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VII ನಿಯಮ 11 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

*ಖರ್ಚಿನ ಮೇಲೆ ಯಾವುದೇ ಆದೇಶವಿರುವುದಿಲ್ಲ.*

(ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 27 ನೇ ಫೆಬ್ರವರಿ 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.